ಕರ್ನಾಟಕ ಸರ್ಕಾರ                                                ಸಿ ಆರ್ ಪಿ ಸಿ 67
ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ**57**)
ನಮೂನೆ ಸಂಖ್ಯೆ4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ. 1120/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಬಿಕ್ಕಿ ಮಂಡಲ್ | | |
| ತಂದೆಃಹೆಸರು | ದಿಲೀಪ್ ಮಂಡಲ್ | ಪಿಡಬ್ಲೂಃ | **06** |
| ವಯಸ್ಸು | **26** ವರ್ಷ | ಸಿಡಬ್ಲೂಃ | **7** |
| ಉದ್ಯೋಗಃ | ಚಾಲಕ | | |
| ವಾಸ ಸ್ಥಳಃ | ಆರ್ ಹೆಚ್ ನಂ.**2** | | |

ದಿನಾಂಕ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ-

ಚಾಸಾ-1 ರವರು ನಮ್ಮ ಬೀಗರು, ಚ ಾಸಾ-2, 8 ಮತ್ತು 3 ರವರ ಪರಿಚಯವಿದೆ. ಚಾಸಾ-4 ನನ್ನ ಭಾವ, ಚಾಸಾ-5 ನನ್ನ ತಂದೆ. ಅರೋಪಿತರ ಪರಿಚಯವಿದೆ.

ನಾನು ಮತ್ತು ಚಾಸಾ-8 ರವರು ನಿದ್ದೆ ಮಾಡುತ್ತಿದ್ದೆವು. ನಾವಿಬ್ಬೂರು ಹೋಡಿಹೋಗಿದ್ದು. ಆರೋಪಿತರು ಮಿಸ್ಸಿಂಗ್ ಕಂಪ್ಲೇಂಟ್ ಕೊಟ್ಟಿದ್ದರು. ಆರೋಪಿತರು ಮದುವೆ ಮಾಡಿಸುತ್ತೇವೆ ಎಂದು ಹೇಳಿದ್ದರಿಂದ ನಾವು ಊರಿಗೆ ಬಂದಿದ್ದೆವು. ನಮ್ಮ ಮನೆಯಲ್ಲಿ ಒಪ್ಪಿಕೊಂಡಿದ್ದರು ಆರೋಪಿತರ ಮನೆಯಲ್ಲಿ ಒಪ್ಪಿಕೊಂಡಿರಲಿಲ್ಲ. ಆದ್ದರಿಂದ ಚಾಸಾ-8 ರವರು ಆಗಸ್ಟ್ 2018 12 ನೇ ತಾರೀಖಿನಂದು ನಮ್ಮ ಮನೆಗೆ ಬಂದಿದ್ದರು. ಆದ್ದರಿಂದ ಆೆರೋಪಿತರು ನಮ್ಮ ಮನೆಯ ಮುಂದೆ ಆ ದಿನ ಬೆಳಿಗ್ಗೆ ಬಂದು ಗಲಾಟೆ ಮಾಡುತ್ತಿದ್ದರರು. ಹಾಗಾಗಿ ನನ್ನ ತಂದೆ ಚಾಸಾ-1 ರವರಿಗೆ ಕರೆ ಮಾಡಿದ್ದರು. ಚಾಸಾ-1 ರವರು ಫೋನ್ ಎತ್ತಲಿಲ್ಲ ಆದ್ದರಿಂದ ಅವರ ಮಗನಾದ ಚಾಸಾ-4 ರವರಿಗೆ ಕರೆ ಮಾಡಿ ಹೇಳಿದ್ದರು. ನಂತರ ಚಾಸಾ-4 ರವರು ಬಂದರು. ನೀನು ಇವರಿಗೆ ಸಹಾಯ ಮಾಡುತ್ತೀಯ ಎಂದು ಹೇಳಿ 2 ನೇ ಆರೋಪಿ ಚಾಸಾ-4 ರವರಿಗೆ ಬೈದಿದ್ದರು ಮತ್ತು ಚಪ್ಪಲಿಯಿಂದ ಬಡೆದಿದ್ದರು. ನಂತರ ಚಾಸಾ-4 ರವರು ಚಾಸಾ-1 ರವರಿಗೆ ಸದರಿ ವಿಷಯ ತಿಳಿಸಿದ್ದರು. ನಂತರ ಚಾಸಾ-1 ರವರು ನನ್ನ ಮಗನಿಗೆ ಏಕೆ ಬಡಿದಿದ್ದೀರಿ ಎಂದು ಕೇಳಿದ್ದರು. ನಂತರ ಆರೋಪಿತರು ಅವರಿಬ್ಬರಿಗೂ ಹೊಡೆದಿದ್ದರು. ಸದರಿ ವಿಚಾರವನ್ನು ನಾನು ಪೋಲೀಸರಿಗೆ ಹೇಳಿದ್ದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ

ದಿಃ 07.08.2018 ರಂದು ಚಾಸಾ-8 ರವರು ನಿಮ್ಮೊಂದಿಗೆ ಬಂದಿದ್ದರು ಎಂದರೆ ಸರಿ. ಸದರಿ ವಿಷಯದ ಚರ್ಚೆ ಕುರಿತು ಚಾಸಾ-1 ರವರನ್ನು ಕರೆಸಿದ್ದರು, ಅವರು ಹೊರಗಡೆ ಹೋಗಿದ್ದರು ಆದ್ದರಿಂದ ಚಾಸಾ-4 ರವರು ಬಂದಿದ್ದರು ಎಂದರೆ ಸರಿ. 1 ನೇ ಆರೋಪಿ ಚಪ್ಪಲಿನಿಂದ ನಿಮ್ಮ ತಲೆಗೆ ಮತ್ತು 2 ನೇ ಆರೋಪಿ ಕೈಯಿಂದ ಬೆನ್ನಿಗೆ ಹೊಡೆದಿದ್ದರು ಎಂದರೆ ಸರಿ. ಚಾಸಾ-5 ಮತ್ತು 6 ರವರು ಜಗಳ ಬಿಡಿಸಿದ್ದರು ಎಂದರೆ ಸರಿ. ಲೇ ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದರು ಎಂದರೆ ಸರಿ. ಇಂದು ನಿಮ್ಮ ಮಗನನ್ನು ಕೊಲೆ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿದ್ದರು ಎಂದರೆ ಸರಿ.

<u>ಮಾನ್ಯ ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.</u>

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.**)**

**ಓ ಹೇ ಕೇ ಸ ಇದೆ.**

**C/c 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.